REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2021-2023
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

ಪಟ್ಟಣ ಸಹಕಾರ ಬ್ಯಾಂಕುಗಳ
# ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ವಾರಪತ್ರಿಕೆ

ಸಂಪುಟ : 28 । ಸಂಚಿಕೆ : 29 । ಅಕ್ಟೋಬರ್ 27, 2021 । ಬುಧವಾರ । ಪುಟಗಳು : 8 । ಬೆಲೆ : 2/-




## ಹಣದುಬ್ಬರವನ್ನು 4 ಪ್ರತಿ ಶತಕ್ಕೆ ಮರಳಿ ತರಲು ಆರ್‌ಬಿಐ ಬದ್ಧ : ಶಕ್ತಿಕಾಂತ್‌ದಾಸ್

**ಮುಂಬೈ :** ರಿಸರ್ವ್ ಬ್ಯಾಂಕ್ ಗವರ್ನರ್ ಶಕ್ತಿಕಾಂತ ದಾಸ್ ಅವರು ಚಿಲ್ಲರೆ ಹಣ ದುಬ್ಬರವನ್ನ ಅಡ್ಡಿಪಡಿಸದ ರೀತಿಯಲ್ಲಿ ಶೇ. 4ರ ಮಟ್ಟಕ್ಕೆ ಮರಳಿ ತರಲು ಆರ್‌ಬಿಐ ಸಂಪೂರ್ಣವಾಗಿ ಬದ್ಧವಾಗಿದೆ ಎಂದು ಹೇಳಿದರು. ಈ ತಿಂಗಳ ಆರಂಭದಲ್ಲಿ ನಡೆದ ಹಣಕಾಸು ನೀತಿ ಪರಿಶೀಲನಾ ಸಭೆಯಲ್ಲಿ ಪಾಲಿಸಿ ದರವನ್ನ ಉಳಿಸಿಕೊಳ್ಳಲು ಮತ ಚಲಾಯಿಸುವಾಗ ಅವರು ಇದನ್ನ ಹೇಳಿದರು. ಆರ್‌ಬಿಐ ಬಿಡುಗಡೆ ಮಾಡಿದ ಹಣಕಾಸು ನೀತಿ ಸಮಿತಿ (MPC) ಸಭೆಯ ವಿವರಗಳಿಂದ ಈ ಮಾಹಿತಿ ಲಭಿಸಿದೆ.

ಗ್ರಾಹಕ ಬೆಲೆ ಸೂಚ್ಯಂಕ (CPI) ಆಧರಿಸಿದ ಹಣ ದುಬ್ಬರವನ್ನ ಎರಡು ಶೇಕಡಾ ವ್ಯತ್ಯಾಸದೊಂದಿಗೆ ನಾಲ್ಕು ಶೇಕಡಾದಲ್ಲಿ ಇರಿಸಿಕೊಳ್ಳುವ ಗುರಿಯನ್ನ ಸರ್ಕಾರವು ಆರ್‌ಬಿಐಗೆ ನೀಡಿದೆ. ಮೇ ಮತ್ತು ಜೂನ್‌ನಲ್ಲಿ ಶೇ.6ಕ್ಕಿಂತ ಹೆಚ್ಚಿದ್ದ ಚಿಲ್ಲರೆ ಹಣದುಬ್ಬರ ಸೆಪ್ಟೆಂಬರ್‌ನಲ್ಲಿ ಶೇ.4.35ಕ್ಕೆ ಇಳಿಕೆಯಾಗಿದೆ.

ಹಣಕಾಸು ನೀತಿ ಸಮಿತಿಯ ಸಭೆಯ ವಿವರಗಳ ಪ್ರಕಾರ, ಆಗಸ್ಟ್ 2021ರ ಸಭೆಯಲ್ಲಿ ಸಮಿತಿಯು ಸತತ ಎರಡನೇ ತಿಂಗಳಿಗೆ ತೃಪ್ತಿಕರ ಮಿತಿಯನ್ನು ಮೀರಿದ ಮುಖ್ಯಾಂಶ ಹಣ ದುಬ್ಬರದ ಸವಾಲುಗಳನ್ನ ಎದುರಿಸಬೇಕಾಯಿತು ಎಂದು ದಾಸ್ ಹೇಳಿದರು. ಜುಲೈ-ಆಗಸ್ಟ್ ಅವಧಿಯಲ್ಲಿನ ಹಣದುಬ್ಬರದಲ್ಲಿ ಮಿತವಾಗಿರುವುದರೊಂದಿಗೆ MPCಯ ದೃಷ್ಟಿಕೋನ ಮತ್ತು ವಿತ್ತೀಯ ನೀತಿಯ ನಿಲುವು ಸರಿಯಾಗಿದೆ ಎಂದು ಅವರು ಹೇಳಿದರು.



**ಆಹಾರ ಹಣದುಬ್ಬರದಲ್ಲಿನ ಇಳಿಕೆ :** ಆಹಾರ ಹಣದುಬ್ಬರದಲ್ಲಿ ಗಮನಾರ್ಹವಾದ ಮಿತಿಯಿಂದಾಗಿ ಈ ವರ್ಷದ ಜುಲೈ ಮತ್ತು ಆಗಸ್ಟ್‌ನಲ್ಲಿ ಹಣದುಬ್ಬರವು ತುಲನಾತ್ಮಕವಾಗಿ ಮಧ್ಯಮವಾಗಿತ್ತು ಎಂದು ಅವರು ಹೇಳಿದರು.

## ಎಸ್.ಬಿ.ಐ.ಗೆ ಒಂದು ಕೋಟಿ ರೂ. ದಂಡ ವಿಧಿಸಿದ ರಿಸರ್ವ್ ಬ್ಯಾಂಕ್

**ಮುಂಬೈ :** ವಂಚನೆ ಪ್ರಕರಣಕ್ಕೆ ಸಂಬಂಧಿಸಿದ ಮಾಹಿತಿ ಹಾಗೂ 2016ರ ಕೇಂದ್ರ ಬ್ಯಾಂಕ್‌ನ ನಿರ್ದೇಶನಗಳನ್ನು ಪಾಲಿಸದ ಕಾರಣಕ್ಕಾಗಿ ಎಸ್‌ಬಿಐಗೆ ಆರ್‌ಬಿಐ ಒಂದು ಕೋಟಿ ರೂ. ದಂಡ ವಿಧಿಸಿದೆ.

ಈ ದಂಡವನ್ನು ಬ್ಯಾಂಕಿಂಗ್ ನಿಯಂತ್ರಣ ಕಾಯಿದೆ 1949 ರ ಸೆಕ್ಷನ್ 47 ಎ (1) (ಸಿ) ವಿಭಾಗ 46 (4) (i) ಮತ್ತು 51(1) ನಿಯಮಗಳ ಅಡಿ ಆರ್‌ಬಿಐಗೆ ನೀಡಲಾದ ಅಧಿಕಾರವನ್ನು ಚಲಾಯಿಸುವ ಮೂಲಕ ವಿಧಿಸಲಾಗಿದೆ ಎಂದು ಕೇಂದ್ರೀಯ ಬ್ಯಾಂಕ್ ಸುತ್ತೋಲೆಯಲ್ಲಿ ತಿಳಿಸಿದೆ.

ಎಸ್‌ಬಿಐ ಬ್ಯಾಂಕ್ ತನ್ನ ಗ್ರಾಹಕರೊಂದಿಗೆ ಮಾಡಿಕೊಂಡ ವಹಿವಾಟು ಅಥವಾ ಒಪ್ಪಂದದ ಬಗ್ಗೆ ಯಾವುದೇ ರೀತಿ ಮಾಹಿತಿ ನೀಡಿಲ್ಲ. ಅಲ್ಲದೇ ಬ್ಯಾಂಕಿನಲ್ಲಿ ನಿರ್ವಹಿಸಲಾದ ಗ್ರಾಹಕ ಖಾತೆಯಲ್ಲಿ ಆರ್‌ಬಿಐ ಪರಿಶೀಲನೆ ನಡೆಸಿದಾಗ ಕೇಂದ್ರೀಯ ಬ್ಯಾಂಕ್ ಖಾತೆಯಲ್ಲಿನ ವಂಚನೆಯ ವರದಿ ವಿಳಂಬ ಮಾಡಿರುವುದು ಪತ್ತೆಯಾಗಿದೆ. ಆರ್‌ಬಿಐ ಒಂದು ಕೋಟಿ ರೂಪಾಯಿ ದಂಡದಿಂದ ಗ್ರಾಹಕರಿಗೆ ಯಾವುದೇ ಸಮಸ್ಯೆ ಇಲ್ಲ. ಈ ಹಣವನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಪಾವತಿ ಮಾಡಬೇಕಿದೆ. ಈ ದಂಡದಿಂದ ಗ್ರಾಹಕರ ಮೇಲೆ ಯಾವುದೇ ಹೊರೆ ಬೀಳುವುದಿಲ್ಲ.

ಅಂತರರಾಷ್ಟ್ರೀಯ ಹಣಕಾಸು ನಿಧಿಗೆ ಗುಡ್‌ಬೈ ಹೇಳಲಿರುವ ಗೀತಾ ಗೋಪಿನಾಥ್ 2
ಕರ್ನಾಟಕ ಮಹಿಳಾ ಸಹಕಾರ ಬ್ಯಾಂಕಿನಿಂದ ನೂತನ ಡಿಜಿಟಲ್ ಸೇವೆಯಾದ UPI ಬಿಡುಗಡೆ 3
ನಿಮ್ಮ ಪ್ರಶ್ನೆ - ನಮ್ಮ ಉತ್ತರ 7

## ಅತ್ಮೀಯ ಸಹಕಾರಿಗಳೇ...



# ಹಿರಿಯರು, ದಾರ್ಶನಿಕರು ತೋರಿದ ಬೆಳಕಿನ ಮಾರ್ಗದಲ್ಲಿ ನಡೆಯುವುದೇ ಕನ್ನಡತನ

ನವೆಂಬರ್ 1ರ ಹೊತ್ತಿಲಲ್ಲಿ ಇರುವ ಹಿನ್ನೆಲೆಯಲ್ಲಿ ನಮ್ಮ ರಾಜ್ಯ ರೂಪುಗೊಂಡ ಕೆಲ ಮಾಹಿತಿ ನಿಮ್ಮೊಂದಿಗೆ ಹಂಚಿಕೊಳ್ಳಬಯಸುತ್ತೇನೆ. 1947ರ ಸ್ವಾತಂತ್ರ್ಯ ನಂತರ, ಅಂದಿನ ಮೈಸೂರು ಮಹಾರಾಜರಾಗಿದ್ದ ಜಯಚಾಮರಾಜ ಒಡೆಯರ್ ಅವರು, ರಾಜ್ಯವನ್ನು ದೇಶದೊಂದಿಗೆ ವಿಲೀನಗೊಳಿಸಿದ ಫಲವಾಗಿ 1950ರಲ್ಲಿ ಮೈಸೂರು ದೇಶದ ಒಂದು ರಾಜ್ಯವಾಯಿತು.

1956ರ ರಾಜ್ಯ ಪುನರ್ವಿಂಗಡನೆ ನಂತರ ಆರಂಭದಲ್ಲಿದ್ದ 19 ಜಿಲ್ಲೆಗಳಿಗೆ ಕೂರ್ಗ್, ಮದರಾಸು, ಹೈದರಾಬಾದ್ ಮತ್ತು ಬಾಂಬೆ ಸಂಸ್ಥಾನದ ಕೆಲ ಪ್ರದೇಶಗಳು ಸೇರಿಸಲ್ಪಟ್ಟು ಮೈಸೂರು ರಾಜ್ಯವೆಂದೇ ಕರೆಯಲ್ಪಡುತ್ತಿತ್ತು.

ನಂತರ ನವೆಂಬರ್ 1, 1973ರಂದು ಶ್ರೀ ದೇವರಾಜ ಅರಸರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಎಲ್ಲರ ಒಮ್ಮತದೊಂದಿಗೆ ಕರ್ನಾಟಕವೆಂಬ ಹೆಸರು ಅಸ್ತಿತ್ವಕ್ಕೆ ಬಂತು. ರಾಜ್ಯವನ್ನು ಕರ್ನಾಟಕ ಎಂದು ನಾಮಕರಣ ಮಾಡಿದ ಸಂದರ್ಭದ ಸವಿ ನೆನಪಿಗಾಗಿಯೇ ಪ್ರತಿವರ್ಷ ನವೆಂಬರ್ 1ರಂದು ರಾಜ್ಯೋತ್ಸವವನ್ನು ಆಚರಿಸಿಕೊಂಡು ಬರಲಾಗುತ್ತಿದೆ.

ಈ ಸಂದರ್ಭದಲ್ಲಿ ಕರ್ನಾಟಕವನ್ನು ಆಳಿದ ಚಕ್ರವರ್ತಿಗಳನ್ನು, ಮಹಾರಾಜರುಗಳನ್ನು, ವೀರರನ್ನು, ಧೀರರನ್ನು ನಾವು ಸ್ಮರಿಸಿಬೇಕಿದೆ. ಹಾಗೆಯೇ, ನಾಡಿನ ಹೆಮ್ಮೆಯ ವೀರ ಪುತ್ರರನ್ನು ನೆನಪಿಸಿಕೊಳ್ಳಬೇಕಿದೆ. ಹಲವು ಧರ್ಮಗಳ, ವಚನಕಾರರ, ದಾರ್ಶನಿಕರ, ಸೂಫಿಗಳ, ಅನುಭಾವಿಗಳ, ಮೇಧಾವಿಗಳ, ವಿಜ್ಞಾನಿಗಳ ನೆಲೆವಿಡು ನಮ್ಮ ಕರ್ನಾಟಕ ಎನ್ನುವುದನ್ನು ನೆನಪಿಸಿಕೊಂಡರೇ ಸಾಕು ಮೈ ರೋಮಾಂಚನಗೊಳ್ಳದೆ ಇರದು. ಇದೇ ನಿಟ್ಟಿನಲ್ಲಿ ಯೋಚಿಸಿದಾಗ; ನಮ್ಮ ಕನ್ನಡ ಬರವಣಿಗೆಯ ಪ್ರಪ್ರಥಮ ದಾಖಲೆ ದೊರಕಿರುವುದು ಸರಿ ಸುಮಾರು ಕ್ರಿ.ಶ.450ರಲ್ಲಿ. ಸಧ್ಯ ದೊರಕಿರುವ ಪ್ರಥಮ ಕನ್ನಡ ಕಾವ್ಯವೆಂದರೇ, 9ನೇ ಶತಮಾನದ ರಾಷ್ಟ್ರಕೂಟ ದೊರೆ ಅಮೋಘವರ್ಷ ನೃಪತುಂಗನ ಕವಿರಾಜಮಾರ್ಗ ಎನ್ನುವುದು ಸಂಶೋಧಕರ ಮಾತು. ಕವಿರಾಜಮಾರ್ಗದಲ್ಲಿ, ಕವಿ ಕನ್ನಡಿಗರನ್ನು "ಪದನರಿದು ನುಡಿಯಲುಂ ನುಡಿದುದನರಿಯಲು ಮಾರ್ಪರ ನಾಡವರ್ಗಳ್ ಚದುರರ್ ನಿಜದಿಂ ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳ್" ಎಂದಿದ್ದಾನೆ.

ನಂತರ ಆದಿ ಕವಿ ಪಂಪನ ಭಾರತ ಮೇರು ಕೃತಿಯೆಂದೇ ಪರಿಗಣಿತವಾಗಿದೆ. ತನ್ನ ಕೃತಿಯ ಮೂಲಕ ಕನ್ನಡ ಕಾವ್ಯ ಪರಂಪರೆಯ ದಿಗ್ಗಜನಾದ ಪಂಪ, "ಆರಂಕುಸವಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ" ಎಂದು ತನ್ನ ನಾಡಿನ ಹಿರಿಮೆ ಸಾರಿದ್ದಲ್ಲದೆ, "ಮಾನವ ಕುಲ ತಾನೊಂದೇ ವಲಂ" ಎಂದು ವಿಶ್ವಮಾನವ ತತ್ವವನ್ನು ಸಾರಿದ ಜಗದ ಕವಿ. ನಂತರದ ಮಹತ್ವದ ಕವಿಯಾದ ರನ್ನನ ಗದಾಯುದ್ಧ, ಜನ್ನನ ಯಶೋಧರ ಚರಿತೆ ನೆನಪಾಗುತ್ತವೆ.

ವಚನ ಸಾಹಿತ್ಯ ಅಂದಿನ ಸಾಮಾಜಿಕ ಕ್ರಾಂತಿಯ ಪ್ರಕ್ರಿಯೆಗೆ ಕನ್ನಡಿ ಹಿಡಿಯುತ್ತದೆ. ಬಸವಣ್ಣನವರಿಂದ ಆರಂಭವಾದ ಈ ಕ್ರಾಂತಿ, ಜಾತಿ, ಮತ, ಧರ್ಮ ಹಾಗೂ ಲಿಂಗ ಸಮಾನತೆಯನ್ನು ಸಾರಿತು. ಜೇಡರ ದಾಸಿಮಯ್ಯ, ಅಂಬಿಗರ ಚೌಡಯ್ಯ, ಅಕ್ಕ ಮಹಾದೇವಿ, ಅಲ್ಲಮ ಪ್ರಭು ಇನ್ನೂ ಅನೇಕರು ತಮ್ಮ ವಚನಗಳ ಮೂಲಕ ಸಮಾಜಕ್ಕೆ ಬೆಳಕು ತೋರಿದ್ದಾರೆ. ಆ ಬೆಳಕಿನ ಮಾರ್ಗದಲ್ಲಿ ನಡೆಯುವುದೇ ಕನ್ನಡತನವೆಂದು ಭಾವಿಸಿರುವೆ, ಎಲ್ಲರಿಗೂ ರಾಜ್ಯೋತ್ಸವದ ಹಾಗೂ ಬೆಳಕಿನ ಹಬ್ಬ ದೀಪಾವಳಿಯ ಶುಭಾಷಯಗಳು.

▸▸ ಎಚ್.ಕೆ. ಪಾಟೀಲ
ಅಧ್ಯಕ್ಷರು

## ಅಂತರರಾಷ್ಟ್ರೀಯ ಹಣಕಾಸು ನಿಧಿಗೆ ಗುಡ್‌ಬೈ ಹೇಳಲಿರುವ ಗೀತಾ ಗೋಪಿನಾಥ್




**ವಾಷಿಂಗ್ಟನ್ :** ಅಂತರರಾಷ್ಟ್ರೀಯ ಹಣಕಾಸು ನಿಧಿಯ (ಐಎಂಎಫ್) ಮುಖ್ಯ ಅರ್ಥಶಾಸ್ತ್ರಜ್ಞೆ ಗೀತಾ ಗೋಪಿನಾಥ್ ಅವರು ತಮ್ಮ ಹುದ್ದೆಯನ್ನು ಜನವರಿಯಲ್ಲಿ ತೊರೆಯಲಿದ್ದಾರೆ, ಅವರು ಹಾರ್ವರ್ಡ್‌ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗಕ್ಕೆ ಮರಳಲಿದ್ದಾರೆ. ಗೀತಾ ಅವರು 2019ರ ಜನವರಿಯಲ್ಲಿ ಐಎಂಎಫ್‌ನಲ್ಲಿ ಮುಖ್ಯ ಅರ್ಥಶಾಸ್ತ್ರಜ್ಞೆಯಾಗಿ ಕೆಲಸ ಆರಂಭಿಸಿದ್ದರು. ಅದಕ್ಕೂ ಮೊದಲು ಅವರು ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ಅಧ್ಯಾಪನ ವೃತ್ತಿಯಲ್ಲಿ ತೊಡಗಿದ್ದರು. 'ಐಎಂಎಫ್‌ಗೆ ಗೀತಾ ಅವರ ಕೊಡುಗೆ ಗಮನಾರ್ಹವಾದುದು' ಎಂದು ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕಿ ಕ್ರಿಸ್ಟಲೀನಾ ಜಾರ್ಜೀವಾ ಹೇಳಿದ್ದಾರೆ. ಗೀತಾ ಅವರು ಜನಿಸಿದ್ದು ಮೈಸೂರಿನಲ್ಲಿ. ಐಎಂಎಫ್‌ನಲ್ಲಿ ಮುಖ್ಯ ಅರ್ಥಶಾಸ್ತ್ರಜ್ಞ ಸ್ಥಾನದಲ್ಲಿ ಕೆಲಸ ನಿಭಾಯಿಸಿದ ಮೊದಲ ಮಹಿಳೆ ಗೀತಾ.

## ಕೊರೊನೋತ್ತರ ಆರ್ಥಿಕ ಚೇತರಿಕೆ : ವಿಶ್ವಬ್ಯಾಂಕ್ ಅಧ್ಯಕ್ಷರ ಜೊತೆ ನಿರ್ಮಲಾ ಚರ್ಚೆ

**ನವದೆಹಲಿ :** ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಕೊರೊನೋತ್ತರದ ಆರ್ಥಿಕ ಚೇತರಿಕೆ, ಕೋವಿಡ್ ವಿರುದ್ಧದ ಜಾಗತಿಕ ಹೋರಾಟದಲ್ಲಿ ಭಾರತದ ಪಾತ್ರ ಸೇರಿದಂತೆ ಇನ್ನೂ ಹಲವು ವಿಷಯಗಳ ಕುರಿತು ವಿಶ್ವಬ್ಯಾಂಕ್‌ನ ಅಧ್ಯಕ್ಷ ಡೇವಿಡ್ ಮಾಲ್‌ಪಾಸ್ ಅವರೊಂದಿಗೆ ಚರ್ಚೆ ನಡೆಸಿದ್ದಾರೆ.

ಆರ್ಥಿಕ ಪರಿಹಾರ ಕ್ರಮಗಳನ್ನು ತೆಗೆದುಕೊಳ್ಳುವುದರ ಜೊತೆಗೆ, ಬಿಕ್ಕಟ್ಟನ್ನು ಒಂದು ಅವಕಾಶವಾಗಿ ಪರಿವರ್ತಿಸಲು ಮತ್ತು ಸದೃಢವಾಗಿ ಹೊರಹೊಮ್ಮಲು ಗಮನಾರ್ಹವಾದ ಸಾಂಸ್ಥಿಕ ಸುಧಾರಣೆಗಳನ್ನು ಸಹ ಭಾರತ ಸರ್ಕಾರವು ತೆಗೆದುಕೊಂಡಿದೆ ಎಂದು ವಿಶ್ವಬ್ಯಾಂಕ್‌ನ ಅಧ್ಯಕ್ಷರಿಗೆ ತಿಳಿಸಿದರು.

## ಕರ್ನಾಟಕ ಮಹಿಳಾ ಸಹಕಾರ ಬ್ಯಾಂಕಿನಿಂದ ನೂತನ ಡಿಜಿಟಲ್ ಸೇವೆಯಾದ UPI ಬಿಡುಗಡೆ



**ಚಿಕ್ಕಮಗಳೂರು :** ಕರ್ನಾಟಕ ಮಹಿಳಾ ಸಹಕಾರ ಬ್ಯಾಂಕ್ ನಿಯಮಿತ, ಚಿಕ್ಕಮಗಳೂರು ಮತ್ತು ಶಿವಮೊಗ್ಗ ನಗರಗಳಲ್ಲಿ ಶಾಖೆಯನ್ನು ಹೊಂದಿದ್ದು, ಎಲ್ಲಾ ರೀತಿಯ ಡಿಜಿಟಲ್ ಸೇವೆಗಳಾದ RTGS/ NEFT, NACH, BBPS, Adhar Payment Services, DBTL (LPG subsidy facility), ATM, POS, Swiping Machine, Mobile Banking, IMPS ಗಳನ್ನು ಈಗಾಗಲೇ ನೀಡುತ್ತಾ ಬಂದಿದ್ದು, ಇದರೊಂದಿಗೆ ದಿನಾಂಕ 09/10/2021 ರಂದು ನಡೆದ ಮಹಾಸಭೆಯಲ್ಲಿ ನೂತನವಾಗಿ UPI ಸೌಲಭ್ಯವನ್ನು ಬ್ಯಾಂಕಿನ ಅಧ್ಯಕ್ಷರಾದ ಕು. ಬಿ.ಸಿ. ಗೀತಾರವರು ಉದ್ಘಾಟಿಸಿದರು. ಇದರಿಂದ ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಯ ಗ್ರಾಹಕರಿಗೆ ಎಲ್ಲಾ ರೀತಿಯ ಆಧುನಿಕ ಸೇವೆ ಸಿಕ್ಕಂತಾಗಿದೆ ಎಂದು ಹಾಗೂ ಈ ಸೇವೆಯನ್ನು ನಗರದ ಸಹಕಾರ ಬ್ಯಾಂಕುಗಳಲ್ಲಿ ಪ್ರಪ್ರಥಮವಾಗಿ ಪರಿಚಯಿಸಿದ ಬ್ಯಾಂಕ್ ಆಗಿದ್ದನ್ನು ಸಭೆಯಲ್ಲಿ ಬ್ಯಾಂಕಿನ ಅಧ್ಯಕ್ಷರು ತಿಳಿಸಿದರು. ಈ ಸಂದರ್ಭದಲ್ಲಿ ಬ್ಯಾಂಕಿನ ಉಪಾಧ್ಯಕ್ಷರು, ನಿರ್ದೇಶಕರು, ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಾದ ಸತೀಶ್ ಬಿ.ಆರ್ ರವರು, ಶಾಖಾ ವ್ಯವಸ್ಥಾಪಕರುಗಳು ಹಾಗೂ ಎಲ್ಲಾ ಸಿಬ್ಬಂದಿಗಳು ಹಾಜರಿದ್ದರು.

## ಕೌಶಲ್ಯ ತರಬೇತಿ ಶಿಬಿರದ ಉದ್ಘಾಟನಾ ಸಮಾರಂಭ



**ಬಾಗಲಕೋಟೆ :** ಶ್ರೀ ಬಸವೇಶ್ವರ ಬ್ಯಾಂಕಿನ ಸಭಾ ಭವನದಲ್ಲಿ ಶ್ರೀ ಬಸವೇಶ್ವರ ಸಹಕಾರಿ ಬ್ಯಾಂಕು, ಸಿರಿ ಸಾಂಸ್ಕೃತಿಕ ಮಹಿಳಾ ಕ್ಷೇಮಾಭಿವೃದ್ಧಿ ಸಂಘ ಹಾಗೂ ಬಾಗಲಕೋಟ ಜಿಲ್ಲಾ ವನಿತಾಲೋಕ ಇವರ ಸಹಯೋಗದೊಂದಿಗೆ ಆಯೋಜಿಸಿದ ಮಹಿಳೆಯರು ಹಾಗೂ ಮಕ್ಕಳಿಗಾಗಿ ಉಚಿತ ಕೌಶಲ್ಯ ತರಬೇತಿ ಶಿಬಿರದ ಉದ್ಘಾಟನಾ ಕಾರ್ಯಕ್ರಮವನ್ನು ಪ್ರಕಾಶ ತಪಶೆಟ್ಟಿಯವರು ಸಸಿಗೆ ನೀರೆರಿಯುವುದರ ಮೂಲಕ ಉದ್ಘಾಟನೆ ನೆರವೇರಿಸಿದರು. ತಮ್ಮ ಅಧ್ಯಕ್ಷೀಯ ನುಡಿಗಳನ್ನಾಡುತ್ತ, ಅಭ್ಯರ್ಥಿಗಳ ಆಸೆಯ ಮೇರೆಗೆ ಸಂದರ್ಭಕ್ಕೆ ತಕ್ಕಂತೆ ತರಬೇತಿ ಶಿಬಿರಗಳನ್ನು ಆಯೋಜಿಸಲು ನಮ್ಮ ಬ್ಯಾಂಕು ಸಿದ್ಧವಾಗಿದೆ ಎಂದರು. ಮಹಿಳೆಯರು ಸ್ವಂತ ಉದ್ಯೋಗ ಮಾಡಿಕೊಳ್ಳಲು, ಆರ್ಥಿಕವಾಗಿ ಹೆಚ್ಚು ಸಬಲರಾಗಲು ಈ ಶಿಬಿರಗಳು ಅನುಕೂಲವಾಗಿವೆ ಎಂದು ಹೇಳಿದರು.

ವೇದಿಕೆಯ ಮೇಲೆ ಬ್ಯಾಂಕಿನ ಮಾಜಿ ನಿರ್ದೇಶಕರಾದ ರಂಗನಗೌಡ ದಂಡನ್ನವರ ತರಬೇತುದಾರರಾದ ಶ್ರೀಮತಿ ರಾಜೇಶ್ವರಿ ಬೋನಗೇರಿ, ವಿಜಯಲಕ್ಷ್ಮೀ ದಿಡ್ಡಿಬಾಗಿಲು, ರಾಜೇಶ್ವರಿ ಅಂಗಡಿ, ಶ್ವೇತಾ ಬಿಜಾಪೂರ ಉಪಸ್ಥಿತರಿದ್ದರು. ಅರ್ಚನಾ ಗಡ್ಡಿಮಠ ಪ್ರಾರ್ಥಿಸಿದ ಕಾರ್ಯಕ್ರಮವನ್ನು ಅಂಬಿಕಾ ಜೋಶಿ ನಿರೂಪಿಸಿದರು. ಶ್ರೀಮತಿ ಜಯಮ್ಮ ಅಬ್ಬುಲಪೂರ ಪ್ರಾಸ್ತಾವಿಕವಾಗಿ ಮಾತನಾಡಿದರು. ಇಂದಿನಿಂದ ಒಂದು ತಿಂಗಳು ಕಾಲ ಬಸವ ಕಲಾ ವೇದಿಕೆಯಲ್ಲಿ ವಿವಿಧ ತರಬೇತಿಗಳು ಜರುಗುವವು ಎಂದು ಹೇಳಿದರು. ಶಿಲ್ಪಾ ಯರಾಶಿ ವಂದಿಸಿದ ಕಾರ್ಯಕ್ರಮವನ್ನು ಶ್ರೀಮತಿ ಉಷಾ ಜಿಗಜಿನ್ನಿ ಎಲ್ಲರನ್ನು ಸ್ವಾಗತಿಸಿದರು. ಕಾರ್ಯಕ್ರಮದಲ್ಲಿ ಅಧಿಕಾರಿಗಳಾದ ಕುಮಾರಿ ಸರೋಜಾ ಕುರ್ತಕೋಟಿ, ಶ್ರೀಮತಿ ಜ್ಯೋತಿ ನಾವಲಗಿ, ಸುಮಂಗಲಾ ಬ್ಯಾಹಟ್ಟಿ ಉಪಸ್ಥಿತರಿದ್ದರು.

## ಶ್ರೀ ಗೋಕರ್ಣನಾಥ ಕೋ-ಆಪರೇಟಿವ್ ಬ್ಯಾಂಕ್ ಲಿ., ಮಂಗಳೂರು



**ಮಂಗಳೂರು :** ಬ್ಯಾಂಕಿನಲ್ಲಿ ಕಳೆದ 39 ವರ್ಷಗಳಿಂದ ಆಡಳಿತ ಕಛೇರಿ ಹಾಗೂ ಶಾಖೆಗಳಲ್ಲಿ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ ಶ್ರೀ ಭರತ್ ಭೂಷಣ್ ಸುವರ್ಣರವರು ಬ್ಯಾಂಕಿನ ಜನರಲ್ ಮೆನೇಜರ್ ಹುದ್ದೆಯಿಂದ ದಿನಾಂಕ 31-08-2021 ರಂದು ಸೇವೆಯಿಂದ ನಿವೃತ್ತಿ ಹೊಂದಿದರು. ಈ ನಿಟ್ಟಿನಲ್ಲಿ ಬ್ಯಾಂಕಿನ ನಿರ್ದೇಶಕ ಮಂಡಲಿ ವತಿಯಿಂದ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಎಂ.ರಾಮಚಂದ್ರರವರು ಪ್ರಾಸ್ತಾವಿಕವಾಗಿ ಮಾತನಾಡಿ ಶ್ರೀ ಭರತ್ ಭೂಷಣ್‌ಸುವರ್ಣರವರ ಸೇವೆಯನ್ನು ಶ್ಲಾಘಿಸುತ್ತಾ ಮುಂದಿನ ಜೀವನ ಸುಖ ಹಾಗೂ ಸಂತೋಷಮಯವಾಗಿರಲಿ ಎಂದು ಹಾರೈಸಿದರು. ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ಕೃಷ್ಣಪ್ಪ ಪೂಜಾರಿ, ನಿರ್ದೇಶಕರಾದ ಶ್ರೀ ಯೋಗೀಶ್ ಕೋಟ್ಯಾನ್, ಶ್ರೀ ಸದಾನಂದ ಅಮೀನ್, ಶ್ರೀ ಅಶೋಕ್ ಸುವರ್ಣ, ಶ್ರೀ ಶೇಖರ ಬಂಗೇರ, ಶ್ರೀ ಕೆ.ಪದ್ಮನಾಭ ಕೋಟ್ಯಾನ್, ಶ್ರೀ ಹರೀಶ್ ಪೂಜಾರಿ ಕೆ., ಶ್ರೀ ಚಂದ್ರಶೇಖರ್‌ಕುಮಾರ್, ಶ್ರೀಮತಿ ಎಂ. ಗಾಯತ್ರಿ, ಶ್ರೀಮತಿ ಗಾಯತ್ರಿ ಗಣೇಶ್, ಶ್ರೀಮತಿ ಚಂದ್ರಾವತಿ, ಶ್ರೀ ಪಿ. ವಿಶ್ವನಾಥ ನಾಯ್ಕ್, ಶ್ರೀ ಬಿ.ರಮೇಶ್, ಶ್ರೀ ಯಶೋಧರ್ ಪಿ.ಕರ್ಕೇರಾ ಹಾಗೂ ಬ್ಯಾಂಕಿನ ಪ್ರಭಾರ ಜನರಲ್ ಮೆನೇಜರ್ ಶ್ರೀ ರಾಜಾರಾಮ್ ಬಿ.ಅಂಚನ್‌ರವರು ಉಪಸ್ಥಿತರಿದ್ದರು.

# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

**ವಿಶೇಷ ರಾಜ್ಯಪತ್ರಿಕೆ**

| ಭಾಗ–೪ಎ<br>Part-IVA | ಬೆಂಗಳೂರು, ಗುರುವಾರ, ೦೭, ಅಕ್ಟೋಬರ್, ೨೦೨೧ (ಆಶ್ವಯುಜ, ೧೫, ಶಕವರ್ಷ, ೧೯೪೩)<br>BENGALURU, THURSDAY, 07, OCTOBER, 2021 (ASHWAYUJA, 15, SHAKAVARSHA, 1943) | ನಂ. ೮೨೪<br>No. 824 |
|---|---|---|

**ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ.**

**ಅಧಿಸೂಚನೆ.**

**ಸಂಖ್ಯೆ: ಸಂವ್ಯಶಾಇ 20 ಶಾಸನ 2021, ಬೆಂಗಳೂರು, ದಿನಾಂಕ: 07.10.2021**

The Karnataka Official Language Act, 1963 (Karnataka Act 26 of 1963) ಪ್ರಕರಣ 5–ಎ ರಡಿಯಲ್ಲಿ ರಾಜ್ಯಪಾಲರಿಂದ ಅಧಿಕೃತಗೊಳಿಸಿದ the Karnataka Co-operative Societies (Amendment) Act, 2021 (Karnataka Act 36 of 2021) ರ ಭಾಷಾಂತರವನ್ನು ಅಧಿಕೃತ ಕನ್ನಡ ಪಠ್ಯವೆಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯ (ಭಾಗ–IV) ರಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

**2021 ರ ಕರ್ನಾಟಕ ಅಧಿನಿಯಮ ಸಂಖ್ಯೆ: 36**

(2021ರ ಅಕ್ಟೋಬರ್ ತಿಂಗಳಿನ 7ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಅಧಿನಿಯಮ, 2021**

(2021ರ ಅಕ್ಟೋಬರ್ ತಿಂಗಳ 5ನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ನ್ನು (1959 ರ ಕರ್ನಾಟಕ ಅಧಿನಿಯಮ ಸಂಖ್ಯೆ: 11) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ.

ಇದು, ಭಾರತ ಗಣರಾಜ್ಯದ ಎಪ್ಪತ್ತೆರಡನೇ ವರ್ಷದಲ್ಲಿ, ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:–

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.–** ಈ ಅಧಿನಿಯಮವನ್ನು ಕರ್ನಾಟಕ ಸಹಕಾರ ಸಂಘಗಳ (ತಿದ್ವಪಡಿ) ಅಧಿನಿಯಮ, 2021 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 2ನೇ ಪ್ರಕರಣದ ತಿದ್ದುಪಡಿ.–** ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರ (1959ರ ಕರ್ನಾಟಕ ಅಧಿನಿಯಮ ಸಂಖ್ಯೆ: 11) (ಇದರಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 2ನೇ ಪ್ರಕರಣದಲ್ಲಿ (ಇ–1–ಎ) ಖಂಡಕ್ಕೆ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(ಇ–1–ಎ) "ಪ್ರತಿನಿಧಿ" ಎಂದರೆ, ಮಹಾ ಸಭೆಯಲ್ಲಿ ಭಾಗವಹಿಸುವ ಮತ್ತು ಮತಚಲಾಯಿಸುವ ಅಧಿಕಾರದೊಂದಿಗೆ ಇತರ ಸಹಕಾರ ಸಂಘಗಳಲ್ಲಿ ಆ ಸಹಕಾರ ಸಂಘವನ್ನು ಪ್ರತಿನಿಧಿಸಲು ಮತ್ತು ಆತ ಪ್ರತಿನಿಧಿ ಎಂದು ಯಾವುದಕ್ಕೆ ನೇಮಕವಾಗಿರುವನೋ ಆ ಸಹಕಾರ ಸಂಘದ ಚುನಾವಣೆಯಲ್ಲಿ ಸ್ಪರ್ಧಿಸಲು ಅಥವಾ ಅನುಮೋದಿಸಲು ಅಥವಾ ಬೆಂಬಲಿಸಲು ಮಂಡಳಿಯಿಂದ ನೇಮಕವಾದ ಸಹಕಾರ ಸಂಘದ ನಿರ್ದೇಶಕ."

**3. 6ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 6ನೇ ಪ್ರಕರಣದ (2)ನೇ ಉಪ–ಪ್ರಕರಣದಲ್ಲಿ,–

(i) (ಬಿ) ಖಂಡದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು ಎಂದರೆ:

"(ಬಿ) ಎಲ್ಲಾ ಅರ್ಜಿದಾರರು ವ್ಯಕ್ತಿಗಳಾಗಿರುವಲ್ಲಿ, ಅರ್ಜಿದಾರರ ಸಂಖ್ಯೆಯು ಇಪ್ಪತ್ತಕ್ಕಿಂತ ಕಡಿಮೆ ಇರತಕ್ಕದ್ದಲ್ಲ ಮತ್ತು ಅರ್ಜಿದಾರರು ಒಂದೇ ಕುಟುಂಬಕ್ಕೆ ಸೇರಿರತಕ್ಕದ್ದಲ್ಲ; ಮತ್ತು"

(ii) (ಬಿ) ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"(ಬಿ–1) ಎಲ್ಲಾ ಅರ್ಜಿದಾರರು ಸಹಕಾರ ಸಂಘಗಳಾಗಿದ್ದಲ್ಲಿ, ಅರ್ಜಿದಾರರ ಸಂಖ್ಯೆಯು ಹದಿಮೂರಕ್ಕಿಂತ ಕಡಿಮೆ ಇರತಕ್ಕದ್ದಲ್ಲ.

ಪರಂತು ರಾಜ್ಯ ಸರ್ಕಾರವು ವಿಶೇಷ ಪ್ರಕರಣಗಳಲ್ಲಿ ಅರ್ಜಿದಾರ ಸಹಕಾರ ಸಂಘಗಳ ಸಂಖ್ಯೆಯು ಹದಿಮೂರಕ್ಕಿಂತ ಕಡಿಮೆಯಿದ್ದರೂ ಅದನ್ನು ಅನುಮತಿಸಬಹುದು."

**4. 17ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 17ನೇ ಪ್ರಕರಣದಲ್ಲಿ,–

(i) (1)ನೇ ಪ್ರಕರಣದ "ಎಫ್" ಖಂಡದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(ಎಫ್) ಸಂಘದ ಅಥವಾ ಅದಕ್ಕೆ ಹಣಕಾಸು ಒದಗಿಸುವ ಬ್ಯಾಂಕು ಅಥವಾ ಅದರ ಒಕ್ಕೂಟ ಅಥವಾ ಅದರ ಸಂಯುಕ್ತ ಸಂಘದಿಂದ ಸಂಬಳ ಪಡೆಯುವ ಉದ್ಯೋಗಿಯಾಗಿದ್ದರೆ."

(ii) (2ಎ) ಉಪಪ್ರಕರಣದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(2–ಎ) ಯಾರೇ ವ್ಯಕ್ತಿಯು ಒಂದೇ ಬಗೆಯ ವ್ಯವಹಾರ ನಡೆಸುತ್ತಿರುವ ಎರಡು ಅಥವಾ ಹೆಚ್ಚಿನ ಸಹಕಾರ ಸಂಘಗಳಲ್ಲಿ ಸದಸ್ಯನಾಗಿರುವುದು ಅಥವಾ ಸದಸ್ಯನಾಗಿ ಮುಂದುವರೆಯುತ್ತಿರುವುದು ಕಂಡುಬಂದಲ್ಲಿ, ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಅಧಿನಿಯಮ, 2021 ರ ಪ್ರಾರಂಭದ ದಿನಾಂಕದಿಂದ ತೊಂಬತ್ತು ದಿನಗಳ ಅವಧಿಯ ಒಳಗಾಗಿ ಆತನ ಆಯ್ಕೆಯ ಯಾವುದೇ ಒಂದು ಸಂಘದಲ್ಲಿ, ಸದಸ್ಯತ್ವ ಉಳಿಸಿಕೊಳ್ಳುವುದು ಆತನಿಗೆ ಬಾಧ್ಯವಾಗಿರತಕ್ಕದ್ದು. ಹಾಗೆ ಮಾಡಲು ಆತನು ವಿಫಲನಾದರೆ, ಆತ ಹೊಸದಾಗಿ ಯಾವ ಸಹಕಾರ ಸಂಘಕ್ಕೆ ಸೇರಿರುವನೋ ಅದರ ಸದಸ್ಯತ್ವವು ನಿಂತು ಹೋಗುವುದೆಂದು ಭಾವಿಸತಕ್ಕದ್ದು."

**5. 20ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 20ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ,–

(i) (ಎiii) ಖಂಡದ ಪರಂತುಕದ ಬದಲಿಗೆ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"ಪರಂತು ಈ ಖಂಡದಲ್ಲಿರುವುದು ಯಾವುದೂ ಅದರ ನೋಂದಣಿಯಾದ ನಿಕಟ ತರುವಾಯ ನಡೆಯುವ ಅಂಥ ಸಂಘದ ಮೊದಲ ಮಹಾಸಭೆಯಲ್ಲಿ ಮತ್ತು ಸಂಘದ ಆಡಳಿತ ಮಂಡಳಿಯ ಮೊದಲ ಚುನಾವಣೆಯಲ್ಲಿ ಭಾಗವಹಿಸುವ ಸದಸ್ಯನಿಗೆ ಅನ್ವಯವಾಗತಕ್ಕದಲ್ಲ."

(ii) (ಎ–iv) ಖಂಡದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(ಎ–iv) ಆತನಿಗೆ ಯುಕ್ತವಾಗಿ ತಿಳಿಸಲಾದ ಕಳೆದ ಐದು ವಾರ್ಷಿಕ ಮಹಾಸಭೆಗಳ ಪೈಕಿ ಕನಿಷ್ಠ ಯಾವುದೇ ಎರಡು ವಾರ್ಷಿಕ ಮಹಾಸಭೆಗೆ ಹಾಜರಾಗಲು ವಿಫಲನಾದ ಒಬ್ಬ ಸದಸ್ಯ, ಒಬ್ಬ ಪ್ರತಿನಿಧಿ ಅಥವಾ ಒಬ್ಬ ನಿಯೋಗಿ."

(iii) ಪರಂತುಕವನ್ನು ಹೊರತುಪಡಿಸಿ (ಎ–V) ಖಂಡದ ಬದಲಿಗೆ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು ಎಂದರೆ:

"(ಎ–V) ಹಿಂದಿನ ಐದು ಸಹಕಾರ ವರ್ಷಗಳ ಪೈಕಿ ಯಾವುದೇ ಎರಡು ಸಹಕಾರ ವರ್ಷಕ್ಕಾಗಿ ಉಪವಿಧಿಗಳಲ್ಲಿ ನಿರ್ಧಿಷ್ಟಪಡಿಸಬಹುದಾದಂಥ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಬಳಸಿಕೊಳ್ಳಲು ವಿಫಲನಾದ ಒಬ್ಬ ಸದಸ್ಯ ಅಥವಾ ಒಬ್ಬ ಪ್ರತಿನಿಧಿ."

(iv) (ಎ–V) ಖಂಡದ ಅಡಿಯಲ್ಲಿನ ಪರಂತುಕದಲ್ಲಿ **"ಮೂರು ವರ್ಷಗಳ"** ಎಂಬ ಪದಗಳಿಗೆ **"ಒಂದು ವರ್ಷದ"** ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(v) (ಬಿ) ಖಂಡದಲ್ಲಿನ ವಿವರಣೆಯಲ್ಲಿ **"ಹದಿನೈದು ದಿನಗಳಿಗೆ"** ಮತ್ತು **"ಮೂವತ್ತು ದಿನಗಳಿಗೆ"** ಎಂಬ ಪದಗಳ ಬದಲಿಗೆ ಇಪ್ಪತ್ತೊಂದು ದಿನಗಳಿಗೆ**"** ಮತ್ತು 'ನಲವತ್ತೈದು ದಿನಗಳಿಗೆ" ಎಂಬ ಪದಗಳನ್ನು ಅನುಕ್ರಮವಾಗಿ ಪ್ರತಿಯೋಜಿಸತಕ್ಕದ್ದು;

**6. 22ನೇ ಹೊಸ ಪ್ರಕರಣದ ಸೇರ್ಪಡೆ.–** ಮೂಲ ಅಧಿನಿಯಮದ 21ನೇ ಪ್ರಕರಣದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

**"22. ಷೇರುಗಳನ್ನು ಹೊಂದಿರುವುದರ ಮೇಲೆ ನಿರ್ಬಂಧಗಳು:–** ಯಾವುದೇ ಸಹಕಾರಿ ಸಂಘದಲ್ಲಿ, ಸರ್ಕಾರವಲ್ಲದ ಯಾರೇ ಸದಸ್ಯನು ಅಥವಾ ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿ ಪಡೆದು ಯಾವುದೇ ಇತರ ಸಹಕಾರ ಸಂಘ, ರಾಜ್ಯ ಉಗ್ರಾಣ ನಿಗಮ ಅಥವಾ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ (1993ರ ಕರ್ನಾಟಕ ಅಧಿನಿಯಮ ಸಂಖ್ಯೆ 14) ಅಡಿಯಲ್ಲಿ ರಚಿಸಲಾದ ಜಿಲ್ಲಾ ಪಂಚಾಯಿತಿ ಅಥವಾ ಯಾವುದೇ ಶಾಸನಬದ್ದ ಅಥವಾ ಶಾಸನಬದ್ಧವಲ್ಲದ ಮಂಡಳಿ, ಸಮಿತಿ ಅಥವಾ ನಿಗಮವು ನಿಯಮಿಸಬಹುದಾದಂತೆ ಸಂಘದ ಒಟ್ಟು ಷೇರು ಬಂಡವಾಳದಲ್ಲಿ ಶೇಕಡ ಐದರಷ್ಟನ್ನು ಮೀರದಂಥ ಭಾಗಕ್ಕಿಂತ ಹೆಚ್ಚಿನ ಷೇರನ್ನು ಹೊಂದತಕ್ಕದ್ದಲ್ಲ."

**7. 27ಎ ಪ್ರಕರಣದ ತಿದುಪಡಿ.–** ಮೂಲ ಅಧಿನಿಯಮದ 27ನೇ ಪ್ರಕರಣದಲ್ಲಿ,–

(i) (ಎ) ಖಂಡದಲ್ಲಿ **"ಮೂರು"** ಎಂಬ ಪದದ ಬದಲಿಗೆ "ಎರಡು**"** ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು:"

(ii) (ಬಿ) ಖಂಡದಲ್ಲಿ "ಉಪವಿಧಿಗಳಲ್ಲಿ**"** ಎಂಬ ಪದದ ಮೊದಲಿಗೆ **"ಕಳೆದ ಐದು ಸಹಕಾರಿ ವರ್ಷಗಳಲ್ಲಿ ಯಾವುದೇ ಎರಡು ಸಹಕಾರಿ ವರ್ಷಗಳಿಗಾಗಿ"** ಎಂಬ ಪದಗಳನ್ನು ಸೇರಿಸತಕ್ಕದ್ದು; ಮತ್ತು

(iii) ಪರಂತುಕದಲ್ಲಿ **"ಮೂರು ವರ್ಷಗಳ"** ಎಂಬ ಪದಗಳ ಬದಲಿಗೆ **"ಒಂದು ವರ್ಷ"**ದ ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**8. 28ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 28ನೇ ಪ್ರಕರಣದ (2)ನೇ ಉಪ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"(3) ವಿಶೇಷ ಮಹಾಸಭೆಗಾಗಿ ಕೋರಂ, 27ನೇ ಪ್ರಕರಣದ (4)ನೇ ಉಪ–ಪ್ರಕರಣದಲ್ಲಿ ನಿರ್ಧಷ್ಟಪಡಿಸಿದಂತೆಯೇ ಇರತಕ್ಕದ್ದು."

**9. 29ಸಿ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 25 ಪ್ರಕರಣದಲ್ಲಿ,–

(i) (1)ನೇ ಉಪಪ್ರಕರಣದ (ಎ) ಖಂಡದಲ್ಲಿ "ಸಹಕಾರ ಸಂಘಕ್ಕೆ" ಎಂಬ ಪದಗಳ ತರುವಾಯ "ಅಥವಾ ಸೌಹಾರ್ದ ಸಹಕಾರಿಗೆ" ಎಂಬ ಪದಗಳನ್ನು ಸೇರಿಸತಕ್ಕದ್ದು;

(ii) (8) 9ನೇ ಉಪಪ್ರಕರಣದ (ಡಿ) ಖಂಡದಲ್ಲಿ "ಅನರ್ಹಗೊಳಿಸಬಹುದು" ಎಂಬ ಪದದ ಬದಲಿಗೆ "ತೆಗೆದುಹಾಕಬಹುದು ಮತ್ತು ಅನರ್ಹಗೊಳಿಸಬಹುದು" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು.

**10. 29ಇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 39ಇ ಪ್ರಕರಣದಲ್ಲಿ, ಮೊದಲ ಪರಂತುಕದ ತರುವಾಯ, ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:–

"ಮತ್ತು ಪರಂತು ಮಂಡಳಿಯ ಅಂತಹ ರಿಕ್ತ ಸ್ಥಾನಕ್ಕಾಗಿ ಚುನಾವಣೆ ನಡೆಯುವವರೆಗೆ ಉದ್ಭವವಾಗುವ ತಾತ್ಕಾಲಿಕ ಸ್ಥಾನಕ್ಕೆ ಸಂಬಂಧಿಸಿದಂತೆ, ಅದೇ ವರ್ಗದ ಸದಸ್ಯರುಗಳ ಪೈಕಿ ನಾಮನಿರ್ದೇಶನದ ಮೂಲಕ ಮಂಡಳಿಯ ತಾತ್ಕಾಲಿಕ ಸ್ಥಾನವನ್ನು ಭರ್ತಿ ಮಾಡಬಹುದು."

**11. 39ಎಎ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 39ಎಎ ಪ್ರಕರಣದ, (2ನೇ ಉಪಪ್ರಕರಣದಲ್ಲಿ "ಮತದಾರ ಪಟ್ಟಿಗಳನ್ನು" ಎಂಬ ಪದಗಳ ಬದಲಿಗೆ "ಮತದಾರರ ಪಟ್ಟಿಗಳನ್ನು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**12. 39ಐ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 39ಐ ಪ್ರಕರಣದಲ್ಲಿ,–

(i) (4)ನೇ ಉಪ–ಪ್ರಕರಣದಲ್ಲಿ "ಈ ಪ್ರಕರಣವು ಅನ್ವಯವಾಗುವ ವ್ಯಕ್ತಿಗಳೆಂದರೆ" ಎಂಬ ಪದಗಳ ತರುವಾಯ "ಚುನಾವಣಾ ಅಧಿಕಾರಿಗಳು" ಎಂಬ ಪದಗಳನ್ನು ಸೇರಿಸತಕ್ಕದ್ದು; ಮತ್ತು,

(ii) "ಪೋಲಿಂಗ್ ಆಫೀಸರ್‌ಗಳು ಮತ್ತು" ಎಂಬ ಪದಗಳ ತರುವಾಯ "ಮತದಾರರ ಪಟ್ಟಿಯನ್ನು ಸಿದ್ಧಪಡಿಸುವುದಕ್ಕಾಗಿ ಅಥವಾ" ಎಂಬ ಪದಗಳನ್ನು ಸೇರಿಸತಕ್ಕದ್ದು.

**13. 68ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 68ನೇ ಪ್ರಕರಣದಲ್ಲಿ (1)ನೇ ಉಪ ಪ್ರಕರಣದಲ್ಲಿ:–

(i) "ನಿರ್ದೇಶಿಸಬಹುದು" ಎಂಬ ಪದದ ಬದಲಿಗೆ  ನಿರ್ದೇಶಿಸತಕ್ಕದ್ದು" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ii) "ಪದಾಧಿಕಾರಿಗಳನ್ನು" ಎಂಬ ಪದದ ತರುವಾಯ "63ನೇ ಪ್ರಕರಣದ ಅಡಿಯಲ್ಲಿನ ಲೆಕ್ಕಪರಿಶೋಧನಾ ವರದಿಯಲ್ಲಿ ಅಥವಾ" ಎಂಬ ಪದಗಳನ್ನು ಸೇರಿಸತಕ್ಕದ್ದು.

**14. 72ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 72ನೇ ಪ್ರಕರಣದ (5)ನೇ ಉಪ ಪ್ರಕರಣದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು ಎಂದರೆ:_

"(6) ಮೇಲ್ಕಂಡ (1), (2) ಮತ್ತು (5)ನೇ ಉಪ ಪ್ರಕರಣಗಳ ಅಡಿಯಲ್ಲಿ ಸಹಕಾರ ಸಂಘದ ಸಮಾಪನಗೊಳಿಸುವ ಪ್ರಕ್ರಿಯೆಯು ರಿಜಿಸ್ಟ್ರಾರ್ ಅವರು ನಿರ್ದೇಶನ ನೀಡಿದ ದಿನಾಂಕದಿಂದ ಮೂರು ವರ್ಷಗಳ ಅವಧಿಯೊಳಗೆ ಮುಕ್ತಾಯಗೊಳ್ಳತಕ್ಕದ್ದು:

ಪರಂತು ಲಿಖಿತದಲ್ಲಿ ದಾಖಲಿಸಬೇಕಾದ ಕಾರಣಗಳಿಗಾಗಿ ರಿಜಿಸ್ಟ್ರಾರರು, ಸದರಿ ಅವಧಿಯನ್ನು ಒಂದು ವರ್ಷದ ಮತ್ತೊಂದು ಅವಧಿಗೆ ವಿಸ್ತರಿಸಬಹುದು:

ಮತ್ತು ಪರಂತು ರಾಜ್ಯ ಸರ್ಕಾರವು, ರಿಜಿಸ್ಟ್ರಾರನು ಮಾಡಿದ ವರದಿಯ ಮೇಲೆ, ವಿಸ್ತರಣೆಗಾಗಿ ನೈಜ ಕಾರಣಗಳಿವೆಯೆಂದು ಮನಗಂಡರೆ, ದಾಖಲಿಸಬೇಕಾದ ಕಾರಣಗಳಿಗಾಗಿ ಅವಧಿಯನ್ನು ವಿಸ್ತರಿಸುವ ಅಧಿಕಾರವನ್ನು ಹೊಂದಿರತಕ್ಕದ್ದು."

**15. ಸಹಕಾರ ಚುನಾವಣಾ ಪ್ರಾಧಿಕಾರದ ಪದಾವಳಿಯ ಪ್ರತಿಯೋಜನೆ.–** ಮೂಲ ಅಧಿನಿಯಮದಲ್ಲಿ, "ಸಹಕಾರ ಚುನಾವಣೆ ಆಯೋಗ" ಎಂಬ ಪದಗಳು ಬರುವ ಕಡೆಗಳಲ್ಲೆಲ್ಲಾ, "ಸಹಕಾರ ಚುನಾವಣಾ ಪ್ರಾಧಿಕಾರ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

The above translation of the Karnataka Co-operative Societies (Amendment) Act, 2021(Karnataka Act 36 of 2021) shall be authoritative text in the Kannada language under section 5A of the Karnataka Official Language Act, 1963 (Karnataka Act 26 of 1963).

**ಥಾವರ್ ಚಂದ್ ಗೆಹ್ಲೋಟ್**

**ಕರ್ನಾಟಕ ರಾಜ್ಯಪಾಲರು**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ.

ಮತ್ತು ಅವರ ಹೆಸರಿನಲ್ಲಿ,

(ಜಿ. ಶ್ರೀಧರ್)

ಸರ್ಕಾರದ ಕಾರ್ಯದರ್ಶಿ,

ಸಂಸದೀಯ ವ್ಯವಹಾರಗಳು ಮತ್ತು.

ಶಾಸನ ರಚನೆ ಇಲಾಖೆ

# ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕಿನ 115ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆ



ಜ್ಯೋತಿಯನ್ನು ಬೆಳಗಿಸುವ ಮೂಲಕ ಬ್ಯಾಂಕಿನ 2020-2021ನೇ ಸಾಲಿನ 115ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯ ಉದ್ಘಾಟಣೆ



ಬ್ಯಾಂಕಿನ 2020-2021ನೇ ಸಾಲಿನ 115ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆ

ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಆಡಳಿತ ಕಛೇರಿ : ನಂ.3, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-560 018 ಇದರ ದಿನಾಂಕ : 31.03.2021ಕ್ಕೆ ಮುಕ್ತಾಯಗೊಂಡ (2020-21ನೇ ಸಾಲಿನ) 115ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಆವಲಹಳ್ಳಿ ಚಂದ್ರಪ್ಪ ಆರ್. ರವರ ಅಧ್ಯಕ್ಷತೆಯಲ್ಲಿ ದಿನಾಂಕ : 19.09.2021 ರಂದು **VIRTUAL MEETING** ಮುಖಾಂತರ ನಡೆದು ಮಾನ್ಯ ಸದಸ್ಯರುಗಳಿಗೆ ಶೇ.15ರಂತೆ ಷೇರು ನಫೆಯನ್ನು (ಡಿವಿಡೆಂಡ್) ನೀಡಲು ತೀರ್ಮಾನಿಸಲಾಗಿದೆ. ಸದರಿ ಷೇರು ನಫೆಯನ್ನು (ಡಿವಿಡೆಂಡ್) ಸದಸ್ಯರುಗಳ ಉಳಿತಾಯ ಖಾತೆಗೆ ವರ್ಗಾಯಿಸಲಾಗಿದೆ.

## ಸಹಕಾರ ಸಂಘಗಳ ಜಂಟಿ ನಿಬಂಧಕರ ಭೇಟಿ



**ಸವಣೂರ :** ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು, ಬೆಳಗಾವಿ ಪ್ರಾಂತ ಬೆಳಗಾವಿಯ ಶ್ರೀ ಜಿ.ಎಮ್. ಪಾಟೀಲರವರು ಇತ್ತೀಚಿಗೆ ದಿ ಸವಣೂರ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್‌ಗೆ ಭೇಟಿ ನೀಡಿ ಪರಿವೀಕ್ಷಣೆ ನಡೆಸಿ ಬ್ಯಾಂಕಿನ ಪ್ರಗತಿ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಸಹಕಾರ ಸಂಘಗಳ ಸಹಾಯಕ ನಿಬಂಧಕರಾದ ಶ್ರೀ ರಮೇಶ ಗಣಪತಿ ಬಗಲಿ ಹಾಗೂ ಶ್ರೀ ಚಂದ್ರಶೇಖರ ಭಜಂತ್ರಿ, ವಸೂಲಾಧಿಕಾರಿಗಳು, ಸಹಕಾರ ಸಂಘಗಳು, ಸವಣೂರ ಹಾಗೂ ಶ್ರೀ ಸಂಜಯ ಸುಣಗಾರ, ಸಹಕಾರಿ ಅಭಿವೃದ್ಧಿ ಅಧಿಕಾರಿಗಳು, ಹಿರೇಕೆರೂರ ಹಾಗೂ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದ ನಿರ್ದೇಶಕರು ಮತ್ತು ಬ್ಯಾಂಕಿನ ನಿರ್ದೇಶಕರಾದ ಶ್ರೀ ಆರ್.ಎಸ್. ಹಾವಣಗಿ, ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಸಿ.ಜಿ. ನಾರಾಯಣಪೂರ, ಉಪಾಧ್ಯಕ್ಷರಾದ ಶ್ರೀ ಎಂ.ಸಿ. ಹಾವಣಗಿ, ನಿರ್ದೇಶಕರಾದ ಶ್ರೀ ಎಸ್.ಎಮ್. ಗಡೆಪ್ಪನವರ, ಶ್ರೀ ಆರ್.ಬಿ. ಮೆಣಸಿನಕಾಯಿ ಹಾಗೂ ಬ್ಯಾಂಕಿನ ವ್ಯವಸ್ಥಾಪಕರಾದ ಶ್ರೀ ಎಸ್.ಎ. ಹಾಲಗಿ ಯವರು ಉಪಸ್ಥಿತರಿದ್ದರು.

## ನಿಮ್ಮ ಪ್ರಶ್ನೆ ನಮ್ಮ ಉತ್ತರ






**ಸುಧಾಕರ್ ಭಟ್,** ಬ್ಯಾಂಕಿಂಗ್ ಸಲಹೆಗಾರರು.

**1. ನಾನು ನನ್ನ ಹೆಸರಿನಲ್ಲಿ ಮತ್ತು ನನ್ನ ಹೆಂಡತಿ, ಮಗ ಮತ್ತು ಮಗಳ ಹೆಸರಿನಲ್ಲಿ ಬೆಂಗಳೂರಿನ ಒಂದು ಪಟ್ಟಣ ಸಹಕಾರ ಬ್ಯಾಂಕಿನಲ್ಲಿ ರೂಪಾಯಿ 50ಲಕ್ಷ ಠೇವಣಿ ಇಟ್ಟಿದ್ದೇನೆ. ಆ ಬ್ಯಾಂಕಿನ ಮೇಲೆ ಭಾರತೀಯ ರಿಜರ್ವ್ ಬ್ಯಾಂಕಿನಿಂದ ನಿರ್ಬಂಧ ಹೇರಲಾಗಿದೆ. ನನಗೆ ಡಿಐಸಿಜಿಸಿ ಇಂದ ಎಷ್ಟು ಹಣ ದೊರೆಯುತ್ತದೆ?**

**- ರಾಮಕೃಷ್ಣ ಉಡುಪ, ಬೆಂಗಳೂರು.**

**ಉತ್ತರ :** ಡಿ.ಐ.ಸಿ.ಜಿ.ಸಿ ಒಬ್ಬ ಠೇವಣಿದಾರರಿಗೆ ಗರಿಷ್ಠ ರೂಪಾಯಿ 5ಲಕ್ಷದಷ್ಟನ್ನು ನೀಡುತ್ತದೆ. ನೀವು ನಿಮ್ಮ ಹೆಂಡತಿ ಮತ್ತು ಮಕ್ಕಳ ಹೆಸರಿನಲ್ಲಿ ಇಟ್ಟ ಠೇವಣಿಯು ಒಂದೇ ಸಾಮರ್ಥ್ಯ ಮತ್ತು ಅದೇ ಹಕ್ಕಿನಲ್ಲಿ (Same Capacity and same right) ಇದೆಯೋ ಅಥವಾ ವಿಭಿನ್ನನ ಸಾಮರ್ಥ್ಯ ಮತ್ತು ವಿಭಿನ್ನ ಹಕ್ಕಿನಲ್ಲಿ (Different Capacity and different right) ಇದೆಯೋ ಎಂದು ತಿಳಿದುಕೊಳ್ಳುವುದು ಅಗತ್ಯ. ನಿಮ್ಮ ಕುಟುಂಬದ ಎಲ್ಲಾ ಠೇವಣಿ ಒಂದೇ ಸಾಮರ್ಥ್ಯ ಮತ್ತು ಅದೇ ಹಕ್ಕಿನಲ್ಲಿದ್ದರೆ ನಿಮಗೆ ಕೇವಲ ರೂಪಾಯಿ 5ಲಕ್ಷ ವಿಮೆ ಹಣ ಸಿಗುತ್ತದೆ. ಆದರೆ ನಿಮ್ಮ ಠೇವಣಿಯನ್ನು ನಿಮ್ಮ ಹೆಂಡತಿ ಮಕ್ಕಳೊಂದಿಗೆ ಹಲವು ರೀತಿಯ ಜಂಟಿ ಖಾತೆಯಲ್ಲಿ ಇರಿಸಿದ್ದರೆ ನಿಮಗೆ ರೂಪಾಯಿ 5ಲಕ್ಷಕ್ಕಿಂತ ಅಧಿಕ ವಿಮೆ ಹಣ ದೊರೆಯುತ್ತದೆ. ಇದನ್ನು ಸುಲಭವಾಗಿ ಅರ್ಥ ಮಾಡಿಕೊಳ್ಳಲು ಗಂಡ, ಹೆಂಡತಿ, ಮಗ ಮತ್ತು ಮಗಳನ್ನು ಕ್ರಮವಾಗಿ ಎ, ಬಿ, ಸಿ ಮತ್ತು ಡಿ ಎಂದು ಕರೆಯೋಣ. "ಎ" ಸ್ವಂತ ಹೆಸರಿನಲ್ಲಿರಿಸಿದ ಖಾತೆಗೆ ಗರಿಷ್ಠ ರೂ.5ಲಕ್ಷ ದೊರೆಯುತ್ತದೆ. ಅದಲ್ಲದೆ ನೀವು ಬ್ಯಾಂಕಿನ ವಿವಿಧ ಶಾಖೆಗಳಲ್ಲಿ ಜಂಟಿ ಖಾತೆಗಳನ್ನು ಹೊಂದಿದ್ದು, ಎಲ್ಲಾ ಖಾತೆಯಲ್ಲಿ ಕುಟುಂಬದವರ ಹೆಸರು ಒಂದೇ ಕ್ರಮದಲ್ಲಿ (ಉದಾ: ಎ, ಬಿ, ಸಿ ಮತ್ತು ಡಿ) ಕಾಣಿಸಿಕೊಳ್ಳುತ್ತಿದ್ದರೆ ಅಂತಹ ಠೇವಣಿಗಳು ಒಂದೇ ಸಾಮರ್ಥ್ಯ ಮತ್ತು ಅದೇ ಹಕ್ಕಿನಲ್ಲಿ ಇವೆ ಎಂದು ತಿಳಿಯತಕ್ಕದ್ದು ಮತ್ತು ಎಲ್ಲಾ ಜಂಟಿ ಖಾತೆಗಳಿಂದ ಗರಿಷ್ಠ ರೂ.5ಲಕ್ಷ ಮಾತ್ರ ದೊರೆಯುತ್ತದೆ. ಬುದ್ಧಿವಂತಿಕೆಯಿಂದ ನೀವು ಜಂಟಿ ಖಾತೆಯಲ್ಲಿ ಕುಟುಂಬದವರ ಹೆಸರನ್ನು ವಿವಿಧ ಕ್ರಮದಲ್ಲಿ ಹಾಕಿದ್ದರೆ, ಪ್ರತೀ ಖಾತೆಯಿಂದ ರೂ.5ಲಕ್ಷ ದೊರೆಯುತ್ತದೆ. ಉದಾ : (i) ಎ ಮತ್ತು ಬಿ (ii) ಎ ಮತ್ತು ಸಿ (iii) ಬಿ ಮತ್ತು ಎ (iv) ಎ, ಬಿ ಮತ್ತು ಸಿ (v) ಬಿ, ಸಿ ಮತ್ತು ಎ (vi) ಎ, ಬಿ ಮತ್ತು ಡಿ.

ಬ್ಯಾಂಕಿನ ವಿವಿಧ ಶಾಖೆಗಳಲ್ಲಿ ಖಾತೆಗಳಿದ್ದರೆ ಎಲ್ಲಾ ಶಾಖೆಗಳಲ್ಲಿರುವ ಖಾತೆಗಳಿಂದ ಗರಿಷ್ಠ ರೂ.5ಲಕ್ಷ ಸಿಗುತ್ತದೆ. ಬ್ಯಾಂಕಿನ ಮೇಲೆ ನಿರ್ಬಂಧ ವಿಧಿಸಿದ ದಿನಾಂಕದ ನಂತರ ನೀವು ಬ್ಯಾಂಕಿನಿಂದ ಹಣ ವಾಪಸ್ಸು ಪಡೆದಿದ್ದರೆ ಅದನ್ನು ರೂ.5ಲಕ್ಷದಿಂದ ಕಡಿತ ಮಾಡಲಾಗುವುದು.



## ಒನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?
ಕುತೂಹಲಕಾರಿಯಾದ ಸುದ್ದಿಗಳು ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- ಉತ್ತರ ಕನ್ನಡದ ಕಡಲ ತೀರಗಳಲ್ಲಿ ಕಡಲ ರಕ್ಷಕರು ಪ್ರಸಕ್ತ ವರ್ಷ ಈವರೆಗೆ 33 ಸೇರಿ ಒಟ್ಟು 100 ಪ್ರವಾಸಿಗರನ್ನು ರಕ್ಷಿಸಿದ್ದಾರೆ. ಪ್ರಸಕ್ತ ವರ್ಷ ಕಾರವಾರದಲ್ಲಿ, ಮುರುಡೇಶ್ವರ, ಗೋಕರ್ಣ, ಕಡ್ಲೆ, ಓಂ ಬೀಚ್‌ನಲ್ಲಿ ಪ್ರವಾಸಿಗರನ್ನು ರಕ್ಷಣೆ ಮಾಡಲಾಗಿದೆ.
- ಕುಟುಂಬದ ಸದಸ್ಯರೊಂದಿಗೆ ಕನ್ನಡದಲ್ಲಿ ಮಾತನಾಡಿ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರು ಮಾತಾಡ್ಮಾತಾಡ್ ಕನ್ನಡ ಅಭಿಯಾನ ಉದ್ಘಾಟಿಸಿ ಮನವಿ ಮಾಡಿದ್ದಾರೆ.
- ತಮಿಳುನಾಡಿನ, ಈರೋಡ್ಭಾಗದಲ್ಲಿ ಇಟ್ಟಿಗೆ ತಯಾರಿಕೆಗೆ ನಿರ್ಬಂಧ ಹೇರಿರುವ ಪರಿಣಾಮ ಗಡಿ ಜಿಲ್ಲೆ ಚಾಮರಾಜನಗರದಲ್ಲಿ ತಯಾರಿಸಲಾಗುವ ಮಣ್ಣಿನ ಇಟ್ಟಿಗೆಗೆ ಬೇಡಿಕೆ ಹೆಚ್ಚಾಗಿದ್ದು, ಸ್ಥಳೀಯ ಪೂರೈಕೆಗೆ ತೊಡಕಾಗುವ ಆತಂಕ ಶುರುವಾಗಿದೆ.
- ಮುಂಬೈ ಕರ್ನಾಟಕ ಹೆಸರನ್ನು ಕಿತ್ತೂರು ಕರ್ನಾಟಕ ಎಂದು ಬದಲಿಸುವಂತೆ ಹಲವು ವರ್ಷಗಳಿಂದ ಬೇಡಿಕೆ ಇದೆ. ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಬೊಮ್ಮಾಯಿ ಹೇಳಿದ್ದಾರೆ.
- ದೇಶದಲ್ಲಿ ಹೊಸ ಡ್ರೋನ್ ನೀತಿ ಅಳವಡಿಸಿಕೊಳ್ಳಲಾಗಿದ್ದು, ಗ್ರಾಮಾಂತರ ಪ್ರದೇಶಗಳ ಭೂಮಿ ದಾಖಲೆಗಳ ಡಿಜಿಟಲೀಕರಣ ತಯಾರಿಸಲಾಗುತ್ತಿದೆ.
- ಸತತ ನಾಲ್ಕನೇ ದಿನವೂ ಪೆಟ್ರೋಲ್, ಡೀಸೆಲ್ ಬೆಲೆಯಲ್ಲಿ ಏರಿಕೆಯಾಗಿದ್ದು, 2020ರ ಮೇ ತಿಂಗಳಿನಿಂದ ಪೆಟ್ರೋಲ್, ಡೀಸೆಲ್ ಬೆಲೆ ಅನುಕ್ರಮವಾಗಿ ಪ್ರತಿ ಲೀಟರ್‌ಗೆ 36 ರೂಪಾಯಿ ಹಾಗೂ 26.58 ರೂಪಾಯಿಗಳು ಏರಿಕೆಯಾಗಿದೆ.
- ಭಾರತೀಯ-ಅಮೇರಿಕನ್ ವೈಮಾನಿಕ ಮತ್ತು ರಕ್ಷಣಾ ಪರಿಣಿತ ರವಿ ಚೌಧರಿ ಅವರನ್ನು ಪೆಂಟಗಾನ್‌ನಲ್ಲಿ ಪ್ರಮುಖ ಹುದ್ದೆಯೊಂದಕ್ಕೆ ಅಮೇರಿಕ ಅಧ್ಯಕ್ಷ ಜೋ ಬೈಡನ್ ನಾಮನಿರ್ದೇಶನ ಮಾಡಿರುವುದಾಗಿ ಶ್ವೇತ ಭವನ ತಿಳಿಸಿದೆ.
- ಬಾಹ್ಯಾಕಾಶದಲ್ಲಿರುವ ತ್ಯಾಜ್ಯವಸ್ತುಗಳನ್ನು ತಗ್ಗಿಸುವ ತಂತ್ರಜ್ಞಾನವನ್ನು ಪರೀಕ್ಷಿಸುವ ಸಲುವಾಗಿಯೇ ಚೀನಾವು ಹೊಸ ಉಪಗ್ರಹವೊಂದನ್ನು ಯಶಸ್ವಿಯಾಗಿ ಬಾಹ್ಯಾಕಾಶಕ್ಕೆ ಉಡಾಯಿಸಿದೆ.

## ಓದುಗರ ಅನಿಸಿಕೆ...


ಪಟ್ಟಣ ಸಹಕಾರ ಬ್ಯಾಂಕುಗಳ ವಾರ್ತಾ ಪತ್ರಿಕೆ

**ಮತ್ತೂ ಏರಿಕೆಯಾಗುವ ಆತಂಕ :** ಆಹಾರ ವಸ್ತುಗಳ ಬೆಲೆ ಕಡಿಮೆ ಆಗಿರುವುದರಿಂದ ಚಿಲ್ಲರೆ ಹಣದುಬ್ಬರವು ಸೆಪ್ಟೆಂಬರ್‌ನಲ್ಲಿ ಇಳಿಕೆ ಕಂಡಿದೆ ಎಂದು ರಾಷ್ಟ್ರೀಯ ಸಾಂಖ್ಯಿಕ ಇಲಾಖೆ ಹೇಳಿಕೊಂಡಿದೆ. ಆದರೆ, ಆಹಾರ ವಸ್ತುಗಳ ಬೆಲೆ ಕಡಿಮೆ ಆಗಿರುವುದು ಜನ ಸಾಮಾನ್ಯರ ಅನುಭವಕ್ಕೆ ಬಂದಿಲ್ಲ! ಬೆಲೆಗಳ ವೇಗ ಗಮನಿಸಿದರೆ, ಮುಂದಿನ ವರ್ಷವೂ ಸಗಟು ಹಣದುಬ್ಬರ ಮತ್ತೂ ಏರಿಕೆಯಾಗುವ ಆತಂಕ ಎಲ್ಲರಿಗೂ ಇದೆ.

▸▸ ಪುಟ್ಟಮಲ್ಲಪ್ಪ ಎನ್., ಬಳ್ಳಾರಿ

**ಸರ್ಕಾರದ ನೀತಿ ವಿಫಲವೇ? :** ದೇಶದ ವ್ಯಾಪಾರ ಕೊರತೆ ಕಳೆದ ಸೆಪ್ಟೆಂಬರ್ ವೇಳೆಗೆ ರೂ. 1.7 ಲಕ್ಷ ಕೋಟಿ ರೂ.ಗೆ ಏರಿಕೆಯಾಗಿದೆ. ಇದು 14 ವರ್ಷಗಳಲ್ಲೇ ಗರಿಷ್ಠ ಮಟ್ಟವಾಗಿದೆ ಎಂದು ವರದಿಯಾಗಿದ್ದರೆ ಕಳೆದ ವರ್ಷಕ್ಕೆ ಹೋಲಿಸಿದರೆ ಸೆಪ್ಟೆಂಬರ್‌ನಲ್ಲಿ ದೇಶದ ರಫ್ತು ಸುಮಾರು ರೂ. 4 ಲಕ್ಷ ಕೋಟಿಗಳಷ್ಟಿದ್ದರೆ, ಇದೇ ವೇಳೆ ಆಮದು ಸುಮಾರು ರೂ.5.14 ಲಕ್ಷ ಕೋಟಿಗೆ ಏರಿಕೆಯಾಗಿದೆ. ಇದು ಭಾರತದಲ್ಲೇ ತಯಾರಿಸಿ ಎನ್ನುವ ಸರ್ಕಾರದ ನೀತಿ ವಿಫಲವಾಗಿರುವುದನ್ನು ತೋರಿಸುತ್ತಿದೆಯಲ್ಲವೇ?

▸▸ ಕೆ. ಅರವಿಂದಮೂರ್ತಿ, ಶಿವಮೊಗ್ಗ

ಸಂಪಾದಕರು :
**ಪುಂಡಲೀಕ ಎನ್. ಕೇರೂರೆ,**
ಮುಖ್ಯ ಕಾರ್ಯನಿರ್ಹವಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ
ಬ್ಯಾಂಕುಗಳ ಮಹಾಮಂಡಳ ನಿ.,
ಬೆಂಗಳೂರು.

ಇವರಿಗೆ,

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, # 35, 3rd Cross, Sudhamanagar, Bangalore – 560027.